ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 17–07–2018

## ಪತ್ರಿಕಾ ಪ್ರಕಟಣೆ

ಸಂಖ್ಯೆ672/772

# ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳ ಆಹ್ವಾನ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು **2018–19**ನೇ, ಸಾಲಿನಲ್ಲಿ ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಸಂಘಟಿತ ಕಾರ್ಮಿಕರ ಅರ್ಹ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 50 ರಷ್ಟು, ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡ 45 ಅಂಕ ಪಡೆದು ತೇರ್ಗಡೆ ಹೊಂದಿರಬೇಕು. ಪ್ರೌಢಶಾಲೆ (8 ರಿಂದ 10ನೇ ತರಗತಿ ವರೆಗೆ) ಪಿ.ಯು.ಸಿ, ಐ.ಟಿ.ಐ, ಡಿ.ಇಡಿ, ಡಿಪ್ಲೋಮೊ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಮಂಡಳಿಗೆ ವಂತಿಗೆ ಪಾವತಿಸುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂದೆ/ತಾಯಿ/ಪೋಷಕರ ಮಾಸಿಕ ವೇತನ ಗರಿಷ್ಠ ರೂ, 15000/–ಗಳ ಮಿತಿಯಲ್ಲಿರಬೇಕು.

ಮಂಡಳಿಯ ವೆಬ್ ಸೈಟ್ :**www.klwb-kar.com** ನಲ್ಲಿ ಅರ್ಜಿ ಡೌನ್ ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಪ್ರೌಢಶಾಲೆ (8 ರಿಂದ 10ನೇ ತರಗತಿ ವರೆಗೆ) ಪಿ.ಯು.ಸಿ, ಐ.ಟಿ.ಐ, ಡಿ.ಇಡಿ, ಡಿಪ್ಲೋಮೊ, ಪದವಿ, ಸ್ನಾತಕೋತ್ತರ ಪದವಿ, ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದಿನಾಂಕ :31–08–2018 ರಂದು ಸಂಜೆ 5–30 ಗಂಟೆಯೊಳಗಾಗಿ, ಹಾಗೂ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದಿನಾಂಕ :29–09–2018 ರೊಳಗೆ ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ.48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು– 560022 (ದೂರವಾಣಿ ಸಂಖ್ಯೆ :080–23570266)

ಇವರಿಗೆ ತಲುಪಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ673/773

## Application Invited

**Bengaluru, July 17(Karnataka Information)**

The Karnataka Labour Welfare Board, Bangalore invites applications from the eligible children of Organised Sector workers' for Educational assistance for the year 2018-19

The students who have passed in the previous examination with 50% for General and 45% for SC/ST students and who are studying in this academic year 2018-19, in High School, (8th to 10th std) and PUC, ITI, D.ED, Diploma, Degree, Postgraduate, Engineering and Medical are eligible. Parents or guardian's monthly income should not exceed Rs.15,000/-pm and those who are paying contribution to the Karnataka Welfare Fund are eligible to apply.

Applications can be downloaded from the Board's web site, **www.klwb-kar.com** Duly filled in Application forms to be submitted to Welfare Commissioner, Karnataka Labour Welfare Board, Karmika Kalyana Bhavan, No.48, 2nd Floor, Mathikere Main Road, Yeshwanthpur, Bangalore-560 022 (Phone No. 080-23570266) High School, (8th to 10th std) and PUC, ITI, D.ED, Diploma, Degree, Postgraduate students on or before 31-08-2018. & for Engineering and Medical Students, on or before 29-09-2018 The application forms received after the due date will not be considered says official press release.

ಸಂಖ್ಯೆ674/774

**ಎಸಿಬಿಯಿಂದ ಭ್ರಷ್ಟಾಚಾರ ಆರೋಪಿತ 3 ಅಧಿಕಾರಿಗಳ ವಿರುದ್ಧ ದಾಳಿ**
**ಇಂದು ರಾಜ್ಯಾದ್ಯಂತ 8 ಸ್ಥಳಗಳಲ್ಲಿ ವಿವಿಧ ಎಸಿಬಿ ತಂಡಗಳಿಂದ ಕಾರ್ಯಾಚರಣೆ**

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ದಿನಾಂಕ: 17.07.2018 ರಂದು ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳವು ರಾಜ್ಯದ 3 ವಿವಿಧ ಸರ್ಕಾರಿ ನೌಕರರು ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ–ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ 8 ಸ್ಥಳಗಳ ಮೇಲೆ ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮತ್ತು ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. ಶ್ರೀ ವಿಜಯಕುಮಾರ್ ಬಿ ನಿರಾಲಿ, ಜಂಟಿ ನಿರ್ದೇಶಕರು ಮತ್ತು ಗೆಜೆಟೆಡ್ ಅಸಿಸ್ಟೆಂಟ್, ಆಯುಕ್ತರವರ ಕಛೇರಿ, ಕೈಮಗ್ಗ ಮತ್ತು ಜವಳಿ, ರೈಲ್ವೆ ಸಮನಾಂತರ ರಸ್ತೆ, ಕುಮಾರ ಕೃಪ ಪಶ್ಚಿಮ, ಬೆಂಗಳೂರು.
   ಇವರ ರಾಜಾಜಿನಗರದಲ್ಲಿನ ವಾಸದ ಮನೆ ಸೇರಿ ಎರಡು ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ.

2. ಶ್ರೀ ಗಂಗಯ್ಯ, ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ಬೆಂಗಳೂರು ವಿಭಾಗ, ಕೆ.ಜಿ ರಸ್ತೆ, ಬೆಂಗಳೂರು.
   ಇವರ ಹೆಲ್ತ್ ಲೇಔಟ್, ವಿಶ್ವನೀಡಂ ಪೋಸ್ಟ್‌ನ ವಾಸದ ಮನೆ ಹಾಗೂ ದೊಡ್ಡನಕ್ಕೇರಿ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕನಲ್ಲಿರುವ ತೋಟದ ಮನೆ ಮತ್ತು ಕಛೇರಿ.

3. ಶ್ರೀ. ಕೆ.ಎನ್, ರಂಗಸ್ವಾಮಿ, ಎಸಿಎಫ್ (ಸಾಮಾಜಿಕ ಅರಣ್ಯ ವಿಭಾಗ) ಅರಣ್ಯ ಇಲಾಖೆ, ಚಿಕ್ಕಮಗಳೂರು.
   ಇವರ ಕಲ್ಯಾಣನಗರ, ಚಿಕ್ಕಮಗಳೂರುನಲ್ಲಿರುವ ವಾಸದ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ.

ಕರ್ನಾಟಕ ರಾಜ್ಯದ ವಿವಿಧ ಎಸಿಬಿ ಪೊಲೀಸ್ ಠಾಣೆಯ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ದ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ–ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ675/775

## ACB Raids the Properties and Offices of 3 Government Officials

## 8 Places across the State being searched by ACB teams

ACB today has conducted raids over the properties and offices of **3 Government officials** who are believed to have amassed disproportionate assets beyond their known sources of Income. A total of **8 Places** connected to these officials are being searched across the State by various ACB teams. Details of the Government Officials and places being searched are as follows.

1. **Shri.Vijayakumar B Nirali, Joint Director and Gazetted Assistant, Office of The Commissioner, Handloom and Textiles, Railway Parallel Road, Bengaluru.**
   2 houses including his place of stay at Rajajingar and office.
2. **Shri.Gangaiah, Deputy Director, Handloom and Textiles, KG Road, Bengaluru.**
   His place of residence at Health Layout, Vishwanedam Post, Farm House at Doodanakkeri village, Channarayanapattana Taluk, Hassan and office.
3. **Shri. K.N.Rangaswamy, A.C.F (Social Forestry) Chikkamagaluru.**
   His place of residence at Kalyan nagar, Chikkamagaluru and office.

Cases against all the officials mentioned above have been registered at various ACB Police Stations across the State. The search and verification of properties by the ACB teams is continued to find out the Source of Income and other possible places for the Search says official press release.

ಸಂಖ್ಯೆ676/776

**ಬೆಂಗಳೂರು ಜಲಮಂಡಳಿ : ದಿನಾಂಕ:17.07.2018 ರಿಂದ ನೀರು ಪೂರೈಕೆಯಲ್ಲಿ ಭಾಗಶಃ ವ್ಯತ್ಯಯ.**

******

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕಾವೇರಿ ನದಿ ಹಾಗೂ ಕಬಿನಿ ನದಿಯ ಪಾತ್ರದಲ್ಲಿ ಹೆಚ್ಚಾಗಿ ಮಳೆಯಾಗುತ್ತಿದ್ದು, ಕಾವೇರಿ ಮತ್ತು ಕಬಿನಿ ಅಣೇಕಟ್ಟುಗಳಂದ ಹೆಚ್ಚು ನೀರನ್ನು ಹರಿಸುತ್ತಿದ್ದು, ತತ್ಸಂಬಂಧವಾಗಿ ಕಾವೇರಿ ನೀರು ಬಗ್ಗಡ/ಮಣ್ಣುಮಿಶ್ರಿತದಿಂದ (Turbidity) ಹರಿಯುತ್ತಿರುವ ಹಿನ್ನೆಲೆಯಲ್ಲಿ ತೊರೆಕಾಡನಹಳ್ಳಿಯಲ್ಲಿರುವ 4ನೇ ಹಂತ 2ನೇ ಘಟ್ಟದ ಶುದ್ಧೀಕರಿಸಿದ ನೀರು ಸರಬರಾಜಿನಲ್ಲಿ ಕೊರತೆ ಉಂಟಾಗಿರುತ್ತದೆ.

ಇದರಿಂದ ಬೆಂಗಳೂರು ಜಲಮಂಡಳಿಯ ಕಾವೇರಿ ನೀರು ಸರಬರಾಜು ಯೋಜನೆಯ 4ನೇ ಹಂತ 2ನೇ ಘಟ್ಟದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಾದ ಜಂಬೂ ಸವಾರಿ ದಿಣ್ಣೆ, ಬೊಮ್ಮನಹಳ್ಳಿ, ಅಂಜನಾಪುರ, ಏರೋ ಇಂಜಿನ್, ಮಾರತ್‌ಹಳ್ಳಿ, ಎ,ನಾರಾಯಣಪುರ, ಕೆ.ಆರ್.ಪುರಂ, ಹೂಡಿ, ಐ.ಟಿ.ಪಿ.ಎಲ್. ಜಿ.ಕೆ.ವಿ.ಕೆ. ನಾಗವಾರ, ಜಾಲಹಳ್ಳಿ, ಬಾಹುಬಲಿ ನಗರ, ಬಿ.ಎಲ್.ವೃತ್ತ, ಎಂ.ಎಸ್.ಆರ್ ನಗರ, ಹೆಗ್ಗನಹಳ್ಳಿ, ಲಗ್ಗೆರೆ. ದಾಸರಹಳ್ಳಿ, ಶ್ರೀಗಂಧ ಕಾವಲ್, ನಾಗರಭಾವಿ, ಆರ್.ಆರ್ ನಗರ, ನಂದಿನಿ ಲೇಔಟ್, ಮೂಡಲಪಾಳ್ಯ, ವಿಜಯನಗರ, ರಾಜಾಜಿನಗರ ಹಾಗೂ ಸುತ್ತ-ಮುತ್ತಾ ಪ್ರದೇಶಗಳಿಗೆ

ದಿನಾಂಕ:17.07.2018 ರಿಂದ ಕಾವೇರಿ ನೀರು ಪೂರೈಕೆಯಲ್ಲಿ ಭಾಗಶಃ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ677/777

## "ಶೋಕ ಸಂದೇಶ"

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಮೈಸೂರಿನ ಸಂತ ಫಿಲೋಮಿನಾ ಚರ್ಚ್ ನ ಹಿರಿಯ ಪಾದ್ರಿ ಹಾಗೂ ನನ್ನ ಆತ್ಮೀಯರಾಗಿದ್ದ ಫಾದರ್ ಡಿಸಿಯನ್ ವಿಕ್ಟರ್ ನಹೋರ್ನಾ ಅವರು ಇಂದು ನಿಧಾನರಾಗಿದ್ದು ನನ್ನ ಮನಸ್ಸಿಗೆ ತೀವ್ರ ಅಘಾತವನ್ನುಂಟುಮಾಡಿದೆ ಎಂದು ಉನ್ನತ ಶಿಕ್ಷಣ ಸಚಿವ ಜಿ.ಟಿ. ದೇವೇಗೌಡ ಶೋಕ ವ್ಯಕ್ತಪಡಿಸಿದ್ದಾರೆ.

ಫಾದರ್ ಡೆಸಿಯನ್ ವಿಕ್ಟರ್ ನಹೋರ್ನಾ ಪ್ರತಿಷ್ಠಿತ ಡಿಸಿಯನ್ ಎಜುಕೇಷನ್ ಸೊಸೈಟಿಯನ್ನು ಉನ್ನತ ಹಂತಕ್ಕೆ ಕೊಂಡ್ಯೊಯ್ದು ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಅಪಾರ ಕೊಡುಗೆ ನೀಡಿದ್ದರರು. 86ರ ಇಳಿವಯಸ್ಸಿನಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಪ್ರಯೊಗ ಮಾಡುವಂತೆ ನನಗೆ ಸಲಹೆ ನೀಡುತ್ತಿದ್ದರು.ಇವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ.

ಅವರ ಆತ್ಮಕ್ಕೆ ಶಾಂತಿ ಸಿಗಲಿ. ಕುಟುಂಬ ಸದಸ್ಯರಿಗೆ ದೇವರು ದುಃಖ ಭರಿಸುವ ಶಕ್ತಿ ಕೊಡಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ. ಎಂದು ಉನ್ನತ ಶಿಕ್ಷಣ ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಖ್ಯೆ678/778

## ಅಂಚೆ ಅದಾಲತ್

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್, ಕರ್ನಾಟಕ ಅಂಚೆ ವಲಯ, ನಂ. 1, ಅರಮನೆ ರಸ್ತೆ (ಮಹಾರಾಣಿ ವಿಜ್ಞಾನ ಕಾಲೇಜಿನ ಎದುರು) ಬೆಂಗಳೂರು – 560 001 ರವರ ಕಾರ್ಯಾಲಯದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲಾ ವ್ಯಾಪಿಗೆ ಸಂಬಂಧಪಟ್ಟ ಅಂಚೆ ಸೇವೆಗಳ

ಕುಂದು ಕೊರತೆಗಳು, ಅಹವಾಲುಗಳನ್ನು ಪರಿಹರಿಸಲು ಅಂಚೆ ಅದಾಲತ್ (ಡಾಕ್ ಅದಾಲತ್) ನ್ನು ದಿನಾಂಕ: 20-07-2018 ರಂದು ಮಧ್ಯಾಹ್ನ 3.00 ಗಂಟೆಗೆ ಆಯೋಜಿಸಿದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಅಂಚೆ ಸೇವೆಗಳ ಕುಂದುಕೊರತೆಗಳನ್ನು ತಮ್ಮ ಸಂಪೂರ್ಣ ಹಾಗೂ ಸಂಪರ್ಕ ವಿಳಾಸಗಳೊಂದಿಗೆ ತ್ವರಿತ ಪರಿಹಾರಕ್ಕಾಗಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ದಿನಾಂಕ: 15-07-2018 ರ ಒಳಗಾಗಿ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ.

ಈ ಕುಂದುಕೊರತೆಗಳನ್ನು ಈಮೇಲ್ ಮುಖಾಂತರವೂ ಸಹ tech.ka@indiapost.gov.in ಗೆ ಕಳುಹಿಸಬಹುದಾಗಿದೆ. ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ನಿರ್ದಿಷ್ಟ ಅಂಕಿ ಅಂಶಗಳ ವಿವರಗಳೊಂದಿಗೆ ಸಹಾಯಕ ನಿರ್ದೇಶಕರು (ಪಿ.ಜಿ.) ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್‌ರವರ ಕಾರ್ಯಾಲಯ, ಕರ್ನಾಟಕ ಅಂಚೆ ವಲಯ, ಬೆಂಗಳೂರು – 560 001 ಕಳುಹಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ 080-22392631, 22392543ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಸಂಖ್ಯೆ679/779

# ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾವತಿಯಿಂದ ದಿನಾಂಕ: 01-10.2018 ರಂದು ವಿಶ್ವ ನಾಗರಿಕರ ದಿನಾಚರಣೆಯನ್ನು ರಾಜ್ಯಮಟ್ಟದಲ್ಲಿ ಆಚರಿಸುವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ (ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಕ್ರೀಡೆ ಹಾಗೂ ಸಮಾಜ ಸೇವೆ) ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ 6 ವೈಯಕ್ತಿಕ ಪ್ರಶಸ್ತಿಗಳನ್ನು ನೀಡಲಾಗುವುದು.

ಆದ್ದರಿಂದ ವಿವಿಧ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ನಾಗರಿಕರು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುವ ರಾಜ್ಯ ಪ್ರಶಸ್ತಿಗಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೂಲಕ ದಿನಾಂಕ: 10-08-2018 ರೊಳಗಾಗಿ ನಿರ್ದೇಶನಾಲಯಕ್ಕೆ ತಲುಪುವಂತೆ ಕನ್ನಡ ಭಾಷೆಯಲ್ಲಿ ನಿಗದಿತ ನಮೂನೆಯಲ್ಲಿ ದ್ವಿಪ್ರತಿಗಳಲ್ಲಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಪರಿಶೀಲಿಸಲು ಮತ್ತು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಇವರನ್ನು ದೂರವಾಣಿ ಸಂಖ್ಯೆ 080-22860907, 080-22866046 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ680/780

## 2016–17 ಮತ್ತು 2017–18 ನೇ ಸಾಲಿನ

# ಪುಸ್ತಕ ಬಹುಮಾನಕ್ಕಾಗಿ ಜಾನಪದ ಕೃತಿಗಳ ಆಹ್ವಾನ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಜಾನಪದ ಅಕಡೆಮಿಯು ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿಯಲ್ಲಿ ಜಾನಪದ ಕೃತಿಗಳ ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಿದೆ.

ದಿನಾಂಕ: 01-01-2016 ರಿಂದ 31-12-2016 ರವರೆಗೆ ಹಾಗೂ ದಿನಾಂಕ: 01-01-2017 ರಿಂದ 31-12-2017 ರವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಮಡಿರುವ ಕನಿಷ್ಠ 150 ಪುಟಗಳ ಮಿತಿಯಲ್ಲಿರುವ ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ–ವಿಮರ್ಶೆ–ಸಂಶೋಧನೆ ಹಾಗೂ ಜನಪದ ಸಂಕೀರ್ಣ ಪ್ರಕಾರಗಳು ಸೇರಿವೆ.

ಲೇಖಕರು/ಪ್ರಕಾಶಕರು/ಸಂಪಾದಕರು 4 ಕೃತಿಗಳನ್ನು ದ್ವಿಪ್ರತಿ ಬಿಲ್ಲಿನೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು –560 002 ಇವರಿಗೆ ದಿನಾಂಕ: 10–08–2018 ರೊಳಗೆ ಖುದ್ದಾಗಿ ಕೋರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿಕೊಡಲು ಪ್ರಕಟಣೆ ಕೋರಿದೆ.